Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 180] ಮಂಗಳವಾರ 10—4—45 [3 ಪೈ

ಯುದ್ಧ ವಾರ್ತೆ

ಜರ್ಮನಿ— ಹ್ಯಾಂ ನಗರ ಸ್ಟೆಟ್‌ಗಾರ್ಟ್ ರೇಡಿಯೋ ಸ್ಟೇಷನ್ ಇವುಗಳು ಮಿತ್ರಸೇನೆಗಳ ವಶವಾಗಿವೆ.

ರಷ್ಯಾ— ದೂರಪ್ರಾಚ್ಯದಲ್ಲಿ ರಷ್ಯನರು ಹೊಸ ರೈಲ್ವೇ ಲೈನ್ ಹಾಕಿದಾರೆ. 15 ಲಕ್ಷಕ್ಕಿಂತ ಹೆಚ್ಚಾಗಿ ಉತ್ತಮ ಸೇನೆ ಸಿದ್ಧವಿದೆ. ಜಪಾನೀಯರೂ ಗಡಿಯಲ್ಲಿ 15-20 ಲಕ್ಷ ಸೇನೆ ಸಿದ್ಧ ಪಡಿಸಿರುವರು.

ಆಸ್ಟ್ರೀಯ— ವಿಯೆನ್ನಾ ಒಳಗೆ ಒರ್ಮಕ್ ಕೆಸ್ಟ್ರಾಂಡರನ್ನು ಗುಂಡಿನೆಟಿನಿಂದ ಕೊಂದರು ರಷ್ಯಾವು ಆಸ್ಟ್ರಿಯಾವನ್ನು ವಶಪಡಿಸಿಕೊಳ್ಳಲು ಮನಸ್ಸಿಲ್ಲ. ಅಲ್ಲಿ ಪ್ರಜಾಸ್ವಭುತ್ವ ಸರಕಾರ ಸ್ಥಾಪಿಸ ಬೇಕೆಂದಿರುವುರು.

ಗ್ರೀಸ್— ಹೊಸ ಸರ್ಕಾರ ಸ್ಥಾಪಿಸಲಾಗಿದೆ.

ವಿವಿಧ ವರ್ತಮಾನ

ಮದರಾಸಿನ ಜಸ್ಟಿಸ್ ಪಾರ್ಟಿಯವರಿಗೆ ಈಗ ಜ್ಞಾನೋದಯವಾಗಿ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂದು ಪ್ರಕಟಿಸಿರುವರು.

೦ ೦

ನೀಲ ಎಂಬ 18 ವರ್ಷದ ಹುಡುಗಿಯನ್ನು ಮದರಾಸು ರೈಲ್ವೇ ಸ್ಪೇಷ್ಟ್ ಬಳಿ ಪೋಲೀಸಿನವರು ಎತ್ತಿ ಆಸ್ಪತ್ರೆಗೆ ಸೇರಿಸಿದರು. ಆವಳು ಆಹಾರವಿಲ್ಲದೆ ನರಳುತ್ತಾ ಬಿದ್ದಿದ್ದಳು.

೦ ೦

1944 ರಲ್ಲಿ ಭಾರತದಿಂದ 57000 ಟನ್ ಬಟ್ಟೆ ಇತರ ದೇಶಗಳಿಗೆ ರವಾನೆಯಾಗಿದೆ!

೦ ೦

ಲಾರ್ಡ್ ವೇವೆಲ್ಲರು ಭಾರತಕ್ಕೆ ಬರೀ ಕೈಸಲ್ಲೆ ಬರುವುದಿಲ್ಲವೆಂದು ಲಂಡನ್ನಿನಲ್ಲಿ ಸುದ್ದಿ ಹರಡಿದೆ.

೦ ೦

ಭಾರತ ರಾಜಕೀಯ ಖೈದಿಗಳನ್ನು ಬಿಡಲು ಲಾರ್ಡ್ ವೇವೆಲ್ಲರೂ ಎಮ್ ಎಮರಿಯವರೂ ಒಂದು ತೀರ್ಮಾನಕ್ಕೆ ಬಂದಿರುತ್ತಾರೆಂದು ಗೊತ್ತಾಗಿದೆ.

೦ ೦

ಭಾರತದ ರಕ್ಷಣಾ ಇಲಾಖೆಯ ಮಿಸಿ ಭಾಕಿ ಎಲ್ಲಾ ಇಲಾಖೆಗಳನ್ನೂ ಭಾರತೀಯರಿಗೆ ವಹಿಸಲು ಲಾರ್ಡ್ ವೇವೆಲ್ಲರು ಬ್ರಿಟಿಷ್ ಸರ್ಕಾರಕ್ಕೆ ಸೂಚನೆ ಕೊಟ್ಟಿರುತ್ತಾರಂತೆ.

೦ ೦

ಅಮೇರಿಕ ಸಾಲ 260 ರಿಂದ 300 ಸಾವಿರ ಮಿಲಿಯ ಡಾಲರ್ ಗೆ ಹೆಚ್ಚಿ ದ್ದೆ

ವಿಯನ್ನಾದಲ್ಲಿ ಜರ್ಮನ್ ಪ್ರತಿಭಟನೆ

75000 ಮಣ ಅಕ್ಕಿ ನಾಶವೇ ?

ಅಮೆರಿಕಾ ಸೈನ್ಯಕ್ಕೆ ಡಾಕಿ ರಾಶಿ ನಿಧಿ ದೊರೆಯಿತೇ ?

ಪಂಡಿತ ಜವಹರಲಾಲ್ ನೆಹ್ರೂರವರು ಬಿಡುಗಡೆಯಾದ ದಿವಸ ಅವರಿಗೆ ಸನ್ಮಾನ ಮಾಡಲು ಹಣವನ್ನು ಬೊಂಬಾಯಿನಲ್ಲಿ ಶೇಖರಿಸುತ್ತಿರುವರು.

ರಾಣಿ ಮೇರಿ ಉಪಯೋಗಿಸುತ್ತಿದ್ದ ಬೀಸಣಿಗೆಯನ್ನು ಬೊಂಬಾಯಿನಲ್ಲಿ ಹರಾಜು ಮಾಡಿ ಬಂದ 2000 ರೂ.ಗಳನ್ನು ಯುದ್ಧ ನಿಧಿಗೆ ಸೇರಿಸಿದರು,

ಈಗ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸೇರುವ ಸಮ್ಮೇಳನವು ಸರ್ಕಾರದ ಸಮ್ಮೇಳನವೇ ಹೊರತು, ಪ್ರಜೆಗಳ ಸಮ್ಮೇಳನವಲ್ಲವೆಂದು ಮುಂಬೈ ಶ್ರೀ ಮಸಾನಿಯವರು ಹೇಳಿರುತ್ತಾರೆ.

ಈಗ ಜರುಗುವ ಸ್ಯಾನ್‌ಫ್ರಾನ್ಸಿಸ್ಕೊ ಸಮ್ಮೇಳನಕ್ಕೆ ಖರ್ಚು ಅಮೇರಿಕಾಕ್ಕೆ 900000 ಡಾಲರ್ ಆಗುತ್ತದಂತೆ, ಅಂದರೆ ಈಗಿನ ಯುದ್ಧದ 35 ನಿಮಿಷದ ಖರ್ಚು ಎಂದಂತಾಯಿತು.

ಕಲ್ಕತ್ತಾದಲ್ಲಿ ಸರ್ಕಾರಿ ಡಿಪೋಗಳಲ್ಲಿ 75000 ಮಣ ಅಕ್ಕಿ ಮುಗ್ಗಲು ಹಿಡಿದು ಬಿದ್ದಿದೆ.

ಭಾರತದಲ್ಲಿ ಇದುವರೆಗೆ ಎಲ್ಲೂ ಇದುವರೆಗೆ ನವೀನ ರೀತಿಯಲ್ಲಿ ತಯಾರಾಡುವ ಕಾರ್ಖಾನೆ ಇರಲಿಲ್ಲ. ಈಗ ಅನಂತಶಯನದಲ್ಲಿ ಪ್ರಾರಂಭವಾಗಿ ಕೆಲಸ ನಡೆಯುತ್ತಿದೆ. (ಗೊಬ್ಬರದ)

ಮೌಲನ ಅಬುಲ್ ಕಲಂ ಆಜಾದ್ ರವರನ್ನು ಬಂಗಾಳ ಜೈಲಿಗೆ ರವಾನಿಸುವದನ್ನು ಬಂಗಾಳ ಸರ್ಕಾರ ತಿರಸ್ಕರಿಸಿದೆ.

ನಾರ್ವೆಯಲ್ಲಿರೇ ಈಗಿನ ಕದನವ ಕೊನೆಯ ಅಂಕವು ನಡೆಯುವುದಂತೆ.

'ಆರ್ಮಿಡೇ' ಉತ್ಸವದಲ್ಲಿ ಅಮೇರಿಕಾ ಸೇನೆಯ ಮುಖ್ಯ ಅಧಿಕಾರಿಯಾದ ಜನರಲ್ ಜೋಸಫ್ ಡಬ್ಲ್ಯು. ಸ್ಟಿಲ್ವೆಲ್‌ರವರು ಜಪಾನೀಯರ ವಿಷಯವನ್ನೆತಿ, ಅವರು ಈಗ ಬಲಪಡಿಸಿಕೊಂಡಿರುವರೆಂದೂ, ಕೊನೆಯವರೆವಿಗೂ ಕಾದಾಡುವರೆಂದೂ ಹೇಳಿದರು.

ತನಗೆ ಡಾರ್ಡನಲ್ಸ್ ಮೇಲೆ ಅಧಿಕಾರ ಮತ್ತು ಕಾಕ್ಸಸ್ ತಗ್ಗಲಿನಲ್ಲಿ ಸ್ವಲ್ಪ ಸ್ಥಳವನ್ನು ತುರ್ಕಿಯು ಕೊಡಬೇಕೆಂದು ರಷ್ಯಾ ಕೇಳಿರುವುದು.

ಲಕ್ಸೆಂಬರ್ಗ್‌ಕಾಂತಂ ಖೂನಿ ಮೊಕದ್ದಮೆಯಲ್ಲಿ ಅಪ್ರೂವರ್ ಜಯಾನಂದನು ಈಗ ಸೆಷನ್ಸ್ ವಿಚಾರಣೆಯಲ್ಲಿ, ತಾನು ಅಪರಾಧಿಗಳನ್ನೆಲ್ಲಾ ಕಾಣೆಮಾಡಿದೂ, ಪೋಲೀಸರ ಹಿಂಸೆಯಿಂದ ತಾನು ಆರೀತಿ ಹೇಳಿಕೆ ಕೊಟ್ಟೆನೆಂದು ಹೇಳಿರುತ್ತಾನೆ.

ಅಮೇರಿಕಾ 3 ನೇ ಸೇನೆಯವರಿಗೆ ಜರ್ಮನಿಯಲ್ಲಿ ಕಾವು ಗೆದ್ದ ಪ್ರದೇಶದಲ್ಲಿ ಸಿಕ್ಕಿರುವ ಧನದ ರಾಶಿ ವಿವರ—

100 ಟನ್ ಭಂಗಾರ.
ಹೇರಳವಾಗಿ ನೋಟುಗಳು.
ಕೊಳ್ಳೇ ಹೊಡೆದ ಕಲಾವಸ್ತುಗಳು,
3000 ಮಿಲಿಯ ಮಾರ್ಕ್ ಹಣ.
200 ಮಿಲಿಯ ಅಮೇರಿಕಾ ಡಾಲರ್ ನೋಟು.
100 ಮಿಲಿಯ ಫ್ರೆಂಚ್ ಕಾಸು.
110000 ಬ್ರಿಟಿಷ್ ಪೌಂಡು.
4 ಮಿಲಿಯ ನಾರ್ವೆ ಹಣ.
25 ಪೌಂಡು ಚಿನ್ನದ 400 ಚೀಲ-

ಸಂಸ್ಥಾನದ ಸುದ್ದಿಗಳು

ಮೈಸೂರು ಫಿಲಂ ಕಾರ್ಪೊರೇಷನ್ನಿನವರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘಕ್ಕೆ ರೂ. 100 ದಾನ ಮಾಡಿರುತ್ತಾರೆ.

ಈ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ಉಮೇದುವಾರಿಕೆ ವಾಪಸ್ ತೆಗೆದು ಕೊಳ್ಳಬೇಕೆಂದು ಮುಂಬೈನಲ್ಲಿರುವ ಶ್ರೀಯುತೋದರ ದಾಸಪ್ಪನವರಿಗೆ ಕೆಲವರು ತಂತೀ ಕಳಿಸಿರುತ್ತಾರೆ.

ಕೋಲಾರದ ಚಿನ್ನದ ಗಣಿ ಬ್ರಿಟಿಷ್ ಕಂಪೆನಿಯವರಿಗೆ ನಮ್ಮ ಸರ್ಕಾರದವರು ರೂ. 1333000 ಪರಿಹಾರದ ಹಣ ದಾನಾ ಮಾಡಿದೆ.

ಇದೇ ಜೂನಲ್ಲಿ ನಮ್ಮ ಶ್ರೀಮನ್ಮಹಾರಾಜರು ಲಂಡನ್ನಿಗೆ ಹೋಗುವುದಿಲ್ಲವೆಂದು ಗೊತ್ತಾಗಿದೆ.

ರಾಜಧಾನಿಯ ಪೌರಸಭೆಯ ಉಪಜ ನಾವಣೆಗೆ ಶ್ರೀಮತಿ ಕಾವೇರಿ ಬಾಯಿಯವರೂ, ಮತ್ತು ಎ. ವೆಂಕಟೇಶನವರೂ ಉಮೇದುವಾರಿಕೆ ಅರ್ಜಿ ಸಲ್ಲಿಸಿರುತ್ತಾರೆ.

ಮೇಲುಕೋಟೆ ವಿಮೋಕೋಲ್ಲಾಸಿನಿ ಸಭೆಯವರು ನೂತನ ವೈರಮುಡಿ ಮಾಡಿಸಿರುವರು. ಇದನ್ನು ಇದೇ ಮಾಹೆ 13 ಮತ್ತು 14 ರಲ್ಲಿ ಧರಿಸುವರು.

ಈ ಸಾರಿಯ ನ್ಯಾಯವಿಧಾಯಕ ಸಭೆಯ ಅಧಿವೇಶನವು 20—6—45 ರ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗುವದೆಂದು ಸರ್ಕಾರಿ ಪ್ರಕಟಣೆ ಹೊಂಟಿದೆ-

ಹೊಳೇನರಸೀಪುರದಲ್ಲಿ ಮೇ 5, 6 ರಲ್ಲಿ ವೈಶ್ಯ ಸಮ್ಮೇಳನ ನಡೆಯುವುದು.

ಜಗಳೂರಿನಲ್ಲಿ ಕಟ್ಟುವ ಹೈ ಸ್ಕೂಲು ಭವನಕ್ಕೆ ಅಲ್ಲಿನ ಶ್ರೀ ಜೆ. ಎಸ್. ಕಲ್ಲಪ್ಪನವರು ರೂ. 15000 ಕೊಡುವರು.

ಚಾಮರಾಜನಗರದ ದೊಂಬಿ ಮೊಕದ್ದಮೆ ಅಪೀಲು ಬೆಂಗಳೂರಿನಲ್ಲಿ ಹೈ ಕೋರ್ಟಿನಲ್ಲಿ ನಡೆಯುತ್ತಿರುವದು.

ಆಕಾಶವಾಣಿ 11—4—45

ವೃತ್ತಾಂತ ಬೆಳಿಗ್ಗೆ 8-50, ಮಧ್ಯಾಹ್ನ 2-50, ಸಾ. 6-30, 7-30. ರಾತ್ರಿ 10. ಬಿ. 8 ನಾಸ್ವರ. 8-25 ಸಂಗೀತವಾದ್ಯ ಮ. 2 ರಿಂದ 2—50 ರವರಿಗೆ ಮಹಿಳೆಯರಿಗಾಗಿ, ಸಾ 6 ಪಿಟೀಲು, 6-45 ಗಾಯನ ವಿಹಾರ, 7-15 'ತಪೆಲಫ್' ಡಾ || ಮೈ ಕಷ್, 7.50 ಭಾರತೀಶಬ್ದೈಭವ. ರಾ. 8-15 ಹಾಡುಗಾರಿಕೆ ವಿದ್ವಾನ್ ಎಸ್. ಬಾಲಸುಬ್ರಹ್ಮಣ್ಯಂರಿಂದ, 9-45 ವಾರ್ತಾವಾಣಿ.

ಅಮೋಘ ಚಿಕಿತ್ಸೆ

ನ್ಯೂಯಾರ್ಕಿನ ನ್ಯಾಷನಲ್ ಆಸ್ಪತ್ರೆಯಲ್ಲಿ ಇದುವರೆಗೆ ೬೬ ಸಿಫಿಲಿಸ್ ಪೀಡಿತ ಮೂತಾಡಲಾರದಿದ್ದವರಿಗೆ ನವಾತನಾಶಕ ಔಷಧಿಯಿಂದ ಚಿಕಿತ್ಸೆ ಮಾಡಿ ರೋಗಮುಕ್ತರನ್ನಾಗಿ ಮಾಡಿದ್ದಾರೆ. ಅನೇಕರಿಗೆ ನಾಲಿಗೆಮೇಲೆ ಶಸ್ತ್ರ ಚಿಕಿತ್ಸೆ ಮಾಡಿ ಗುಣಪಡಿಸಿದ ನಂತರ ಕುರ್ಚಿಯಲ್ಲಿ ಇಂದು ರಂಧ್ರ ಮಾಡಿ ಗಾಳಿ ಒಳಗೆ ಹೋಗುವಂತೆ ಮಾಡಿ, ಸರಾಗವಾಗಿ ಮಾತನಾಡಲು ಮಾಡಿದರು. ಈ ತರಹ ಚಿಕಿತ್ಸೆ ಮಾಡುವ ಆಸ್ಪತ್ರೆ ಪ್ರಪಂಚದಲ್ಲೇಲ್ಲಾ ಇದು ಒಂದೇ ಒಂದು.

ಸಿನಿಮಾ ನಟಿಗೆ ಜುಲ್ಮಾನೆ

ಮುಫ್ಲರೆಯಲ್ಲಿ ಸಿನಿಮಾ ನಟಿ ರಾಜಮಣಿಯು ಸೊಳಗಾರಿಕೆ ಗೃಹವನ್ನಿಟ್ಟಿದ್ದಳೆಂದು ಅಲ್ಲಿನ್ನ ಕೆಲವು ಯುವತಿಯರನ್ನು ಪಿಡುಗಣೆ ಮಾಡಿ ರೂ. 10 ಜುಲ್ಮಾನೆಯಾಯಿತು.

ಜುಲ್ಮಾನೆ

ಮಧುರೆಯಲ್ಲಿ ಎಳನೀರನ್ನು ಶೇಕಡ 30 ರಂತೆ ಲಾಭದಲ್ಲಿ ಮಾರಿದ್ದಕ್ಕೆ ರೂ. ಜುಲ್ಮಾನೆಯಾಯಿತು

ಶತ್ರುಗಳಿಂದ ಕೊಲ್ಲಲ್ಪಟ್ಟ ಅಮೇರಿಕ ಇಂಜನಿಯರ ಶವವನ್ನು 9 ನೇ ಪಡೆ ಪೈದರು ರೂಪ್ ಮೇಲೆ ಸಾಗಿಸುತ್ತಿರುವುದು.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್
ಮೈಸೂರು

ಷೇರುದಾರರ ವಿಶೇಷ (ಎಕ್ಸ್‌ಟ್ರಾರ್ಡಿನರಿ) ಜನರಲ್ ಮೀಟಿಂಗ್

ನೋಟೀಸ್

1944 ನೇ ಇಸವಿ ಅಕ್ಟೋಬರ್ 14 ರಲ್ಲಿ ನಡೆದ ಷೇರುದಾರರ 24 ನೇ ಸಾಧಾರಣ ಜನರಲ್ ಮೀಟಿಂಗನಲ್ಲಿ ನಿವೃತ್ತ ಡೈರೆಕ್ಟರುಗಳಾಗಿದ್ದು ಚುನಾಯಿತರಾದ ಮ || ಡಿ. ಬಿ. ವಿಶ್ವೇಶ್ವರಯ್ಯ ಮತ್ತು ಮ || ಸಿ. ನರಸಿಂಹಯ್ಯನವರ ಚುನಾವಣೆಯನ್ನು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರು ರದ್ದುಪಡಿಸಿರುತ್ತಾರಾದ್ದರಿಂದ, ಈ ಸ್ಥಾನಗಳಿಗೆ ಇಬ್ಬರು ಡೈರೆಕ್ಟರುಗಳನ್ನು ಚುನಾಯಿಸುವುದಕ್ಕಾಗಿ, ಮೈಸೂರು ನಗರದ ಚಾಮರಾಜ ರೋಡಿನಲ್ಲಿರುವ ಕೊ-ಆಪರೇಟಿವ್ ಹೋಂನಲ್ಲಿ 1945 ನೇ ಇಸವಿ ಏಪ್ರಿಲ್ ತಿಂಗಳು 28 ನೇ ತಾರೀಖು ಸಾಯಂಕಾಲ 5 ಗಂಟೆಗೆ ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್‌ನ ಷೇರುದಾರರ ವಿಶೇಷ (ಎಕ್ಸ್‌ಟ್ರಾರ್ಡಿನರಿ) ಜನರಲ್ ಮೀಟಿಂಗು ನಡೆಯುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಕಂಪನಿಯ ಷೇರ್ ವರ್ಗಾವರ್ಗಿಯು 1944 ನೇ ಏಪ್ರಿಲ್ 22 ರಿಂದ ಏಪ್ರಿಲ್ 30 ರವರೆಗೆ (ಎರಡು ದಿವಸಗಳೂ ಸೇರಿ) ನಿಲ್ಲಿಸಲ್ಪಡುತ್ತದೆ.

ಬೋರ್ಡ್ ಆಫ್ ಮೇರೆ
ಬಿ. ಎಸ್. ವಿಶ್ವೇಶ್ವರಯ್ಯ
ಸೆಕ್ರಿಟರಿ

ಮೈಸೂರು
8 ನೇ ಏಪ್ರಿಲ್ 1945

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

AT OPERA — From 7-4-45

Air Raid Wardens

With Stan Laurel & Oliver Hardy

12-4-45 ರಿಂದ

' ಪೂಂಪಾವೈ '

ಪಾತ್ರ - ರಾಮಸ್ವಾಮಿ, ಜೇವರತ್ನಂ, ವಸುಧರಂ, ಕೃಷ್ಣಕ

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ
4 ನೇ ಅಮೋಘ ವಾರ

ಪಗಲಿ ದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್
ಷೇಕ್‌ಮುಕ್ತಾರ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing—

L. N. Press

Srirampet MYSORE



ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು.